ಅಸಲು ದಾವಾ ನಂ. 17/2021 ಪಿಡಬ್ಲೂ : 1

ದಿನಾಂಕಃ 21-09-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2, 6 ಮತ್ತು 9 ನೇ ಪ್ರತಿವಾದಿಯ ಪರವಾಗಿಃ ಶ್ರೀ ಎಸ್ ವಿ ಎ ವಕೀಲರಿಂದಃ**

9. 2 ನೇ ಪ್ರತಿವಾದಿಯು ನನ್ನ ತಾಯಿಯ ತಮ್ಮನ ಮಗ ಎಂದರೆ ಸರಿ . ನಾನು ಮತ್ತು 2 ನೇ ಪ್ರತಿವಾದಿಯು ನಮ್ಮ ವಿದ್ಯಾಭ್ಯಾಸ ಮುಗಿದ ನಂತರ ಬೆಳಗಾವಿಯಲ್ಲಿ ಸುಮಾರು 3 ವರ್ಷಗಳವರೆಗೆ ಒಟ್ಟಿಗೆ ವಾಸ ಮಾಡುತ್ತಿದ್ದೆವು. ಆ ರೀತಿ ನಾವಿಬ್ಬರು ಅಲ್ಲಿ ಒಟ್ಟಿಗೆ ಇದ್ದು ನಮ್ಮ ನಮ್ಮ ಕೆಲಸಕ್ಕೆ ಹೋಗುತ್ತಿದ್ದೆವು ಎಂದರೆ ಸರಿ. ನಮ್ಮ ಮತ್ತು 2 ನೇ ಪ್ರತಿವಾದಿಯ ಕುಟುಂಬ ಬಹಳ ಅನ್ಯೋನ್ಯವಾಗಿ ಇತ್ತು ಎಂದರೆ ಸರಿ . ಈ ದಾವೆ ಮಾಡುವವರೆಗೂ ನಮ್ಮ ಮತ್ತು 2 ನೇ ಪ್ರತಿವಾದಿಯ ಕುಟುಂಬ ಅನ್ಯೋನ್ಯವಾಗಿ ಇತ್ತು ಎಂದರೆ ಸರಿ . ನಮಗೆ ಗೋಕರ್ಣದ ರಥಬೀದಿಯಲ್ಲಿ ಒಂದು ಅಂಗಡಿ ಇಮಾರತ್ತು ಇದೆ ಎಂದರೆ ಸರಿ . ಸದರಿ ಅಂಗಡಿ ಇರುವ ಜಾಗದ ಸರ್ವೆ ನಂ. 584/3 ಮತ್ತು 585/3/ಬ ಎಂದರೆ ಸರಿ . ಅಲ್ಲಿ ಖಾಲಿ ಇರುವ ಕ್ಷೇತ್ರದ ಸರ್ವೆ ನಂ. 597/2 ಅ ಎಂದರೆ ಸರಿ . ಈ ಕುರಿತು ನಾವು ನಿಪಿ -28 ನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ . ಮೇಲೆ ಹೇಳಿದ ಮೂರು ಸರ್ವೆ ನಂಬರುಗಳು ನಮ್ಮ ಒಟ್ಟೂ ಕುಟುಂಬದ ಆಸ್ತಿಗಳು ಎಂದರೆ ಸರಿ . ಸದರಿ ಮೂರು ಸರ್ವೆ ನಂಬರುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ . ಸದರಿ ಮೂರು ಸರ್ವೆ ನಂಬರುಗಳನ್ನು ಈ ದಾವೆಯಲ್ಲಿ ಬಿಟ್ಟಿರುವುದಕ್ಕೆ ಯಾವುದೇ ಕಾರಣಗಳು ಇಲ್ಲ . ಸದರಿ ಮೂರು ಸರ್ವೆ ನಂಬರುಗಳಲ್ಲಿ ವಾದಿಯವರಾದ ನಮಗೆ ಹಾಗೂ 1 ನೇ ಪ್ರತಿವಾದಿಗೆ ಹಕ್ಕು ಇದೆ ಎಂದರೆ ಸರಿ . ಸದರಿ ಮೂರು ಸರ್ವೆ ನಂಬರುಗಳಿಗೆ ಸಂಬಂಧಪಟ್ಟಂತೆ ನಮ್ಮ ನಡುವೆ ಇಲ್ಲಿಯವರೆಗೆ ವಾಂಟಣೆ ಆಗಿರುವುದಿಲ್ಲ ಎಂದರೆ ಸರಿ . ಮೇಲೆ ಹೇಳಿದ ಎರಡು ಸರ್ವೆ ನಂಬರುಗಳಲ್ಲಿ 5 ಅಂಗಡಿಗಳು ಇವೆ . ಸದರಿ 5 ಅಂಗಡಿಗಳನ್ನು ನಾವು ಬಾಡಿಗೆಗೆ ಕೊಟ್ಟಿರುತ್ತೇವೆ . ಮೇಲೆ ಹೇಳಿದ 5 ಅಂಗಡಿಗಳ ಪೈಕಿ

ನಾನು ಮೂರು ಅಂಗಡಿಗಳ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದೇನೆ ಹಾಗೂ 1 ನೇ ಪ್ರತಿವಾದಿಯು ಎರಡು ಅಂಗಡಿಗಳ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ . ಸದರಿ 5 ಅಂಗಡಿಗಳಲ್ಲಿ ಮೈತ್ರಿ ಮುದ್ರಣಾಲಯ , ಒಂದು ಕಂಪ್ಯೂಟರ್ ಸಂಸ್ಥೆ , ಒಂದು ಗ್ರಂಥಾಲಯ, ಒಂದು ಬೆಂಗಳೂರು ಬೇಕರಿ ಹಾಗೂ 2 ನೇ ಪ್ರತಿವಾದಿಯು ನಡೆಸುತ್ತಿರುವ ಔಷಧಿ ಅಂಗಡಿಗಳು ಇವೆ. ಮೇಲೆ ಹೇಳಿದ ಗ್ರಂಥಾಲಯ ಮತ್ತು ಬೇಕರಿಯಿಂದ ನನ್ನ ಅಣ್ಣ ಬಾಡಿಗೆಯನ್ನು ತೆಗದುಕೊಳ್ಳುತ್ತಿದ್ದಾರೆ . ಸುಮಾರು 23 ವರ್ಷಗಳಿಂದ 2 ನೇ ಪ್ರತಿವಾದಿಯು ಮೇಲೆ ಹೇಳಿದ ಔಷಧಿ ಅಂಗಡಿಯನ್ನು ನಡೆಸುತ್ತಿದ್ದಾರೆ . ಮೇಲೆ ಹೇಳಿದ ಔಷಧಿ ಅಂಗಡಿ ಮತ್ತು ಬೆಂಗಳೂರು ಬೇಕಡಿ ಇರುವ ಜಾಗದಲ್ಲಿ ಮೊದಲು ಗೋಕರ್ಣ ಬಸ್ ನಿಲ್ದಾಣ ಆಗಿತ್ತು ಎಂದರೆ ಸರಿ. ಸದರಿ ಬಸ್ ನಿಲ್ದಾಣದ ಜಾಗವನ್ನು ಪರಿವರ್ತನೆ ಮಾಡಿ ಅಂಗಡಿಗಳನ್ನು ಮಾಡಲಾಗಿದೆ ಎಂದರೆ ಸರಿ.

10. ಈ ದಾವೆಯನ್ನು ಸಲ್ಲಿಸಿದ ನಂತರ ನಾವು 2 ನೇ ಪ್ರತಿವಾದಿಗೆ ಸದರಿ ಔಷಧಿ ಅಂಗಡಿಯನ್ನು ಬಿಟ್ಟುಕೊಡಬೇಕು ಎಂದು ನಮ್ಮ ವಕೀಲರ ಮುಖಾಂತರ ನೋಟಿಸನ್ನು ಕಳಿಸಿರುತ್ತೇವೆ ಎಂದರೆ ಸರಿ. ಸದರಿ ನೋಟಿಸಿಗೆ 2 ನೇ ಪ್ರತಿವಾದಿಯು ಅವರ ವಕೀಲರ ಮುಖಾಂತರ ಉತ್ತರವನ್ನು ಕೊಟ್ಟಿರುತ್ತಾರೆ ಎಂರದೆ ಸರಿ. ಸದರಿ ಉತ್ತರದಲ್ಲಿ 2 ನೇ ಪ್ರತಿವಾದಿಯು ತಾನು ಯಾವತ್ತೂ ಸಹ ಸದರಿ ಅಂಗಡಿಯನ್ನು ಬಿಟ್ಟು ಕೊಡಲು ತಯಾರಿದ್ದೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಉತ್ತರದಲ್ಲಿ 2 ನೇ ಪ್ರತಿವಾದಿಯು ಮಾತುಕತೆಗೆ ಬನ್ನಿ ಎಂದು ನಮಗೆ ಹೇಳಿರುತ್ತಾರೆ ಎಂದರೆ ಸರಿ . ನಮಗೆ ಕಾಲಾವಕಾಶ ಸಿಗದ ಕಾರಣ ನಾವು ಮಾತುಕತೆಗೆ ಹೋಗಿಲ್ಲ. ಈಗ 2 ನೇ ಪ್ರತಿವಾದಿಯು ಸದರಿ ಔಷಧಿ ಅಂಗಡಿಯನ್ನು ನಡೆಸುತ್ತಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ . ಸದರಿ ಅಂಗಡಿಯನ್ನು 2 ನೇ ಪ್ರತಿವಾದಿಯು ನಡೆಸುತ್ತಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ನಾನು ವಿಚಾರಿಸಿರುವುದಿಲ್ಲ . ಮೇಲೆ ಹೇಳಿದ ಮೂರು ಬಾಡಿಗೆ ಅಂಗಡಿಗಳಿಂದ ನನಗೆ ತಿಂಗಳಿಗೆ 6,800/- ರೂಪಾಯಿ ಬರುತ್ತಿದೆ. ಮೇಲೆ ಹೇಳಿದ ಎರಡು ಅಂಗಡಿಗಳಿಂದ 1 ನೇ ಪ್ರತಿವಾದಿಗೆ ಎಷ್ಟು ಬಾಡಿಗೆ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ . ಸಾಕ್ಷಿಯು

ಮುಂದುವರೆದು ಹೇಳುತ್ತಾರೆ ಈಗ್ಗೆ ಒಂದು ವರ್ಷದಿಂದ 2 ನೇ ಪ್ರತಿವಾದಿಯು ತನಗೆ ಸದರಿ ಅಂಗಡಿಯ ಬಾಡಿಗೆಯನ್ನು ಕೊಡುತ್ತಿಲ್ಲ ಎಂದು . 2 ನೇ ಪ್ರತಿವಾದಿಯು ಆ ರೀತಿ ಬಾಗಡಿಗೆ ಕೊಟ್ಟಿಲ್ಲ ಎಂದು ಹೇಳಿರುವ ಬಗ್ಗೆ ಮೇಲೆ ಹೇಳಿದ ನೋಟಿಸನ್ನು ಬಿಟ್ಟು ನಾನು ಬೇರೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ .

11. ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳು ಗೋಕರ್ಣದ ಬೆಲೆಹಿತ್ತಲಿನಲ್ಲಿ ಇವೆ . ಸದರಿ ಆಸ್ತಿಗಳು ಸಮುದ್ರಕ್ಕೆ ಲಗತ್ತಾಗಿರುವ ಆಸ್ತಿಗಳು ಎಂದರೆ ಸರಿ . ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳ ಲಗತ್ತಿಗೆ ಇರುವ ಆಸ್ತಿಗಳು ಗೌಡರಿಗೆ ಸಂಬಂಧಪಟ್ಟ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ . ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳನ್ನು ನಾನು ಕೊನೆಯ ಬಾರಿಗೆ 2011 ರಲ್ಲಿ ನೋಡಿರುತ್ತೇನೆ . ಆ ರೀತಿ ನಾನು ನೋಡಿದಾಗ ಸದರಿ ಎಲ್ಲಾ ಆಸ್ತಿಗಳಲ್ಲಿ ಗುಡಿಸಲುಗಳನು ಕಟ್ಟಿಕೊಂಡು ವಾಸ ಮಾಡುತ್ತಿದ್ದರು . ಆ ರೀತಿ ಗುಡಿಸಲುಗಳನ್ನು ಕಟ್ಟಿಕೊಂಡವರು ಗೌಡರೇ ಹಾಗೂ ಸದರಿ ಆಸ್ತಿಗಳ ಲಗತ್ತುದಾರರು ಎಂದರೆ ಇರಬಹುದು . ಆ ರೀತಿ ನಾನು ನೋಡಿದಾಗ ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳು ಯಾವುದು ಎಂದು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿ . ನಾನು 2011 ರಲ್ಲಿ ಸದರಿ ಆಸ್ತಿಗಳಿಗೆ ಹೀಗೆಯೇ ಹೋಗಿರುತ್ತೇನೆ . ಸುಮಾರು 10 ರಿಂದ 15 ವರ್ಷಗಳ ಹಿಂದೆ ಸದರಿ ಗೋಕರ್ಣದ ಸಮುದ್ರದ ಬದಿಯಲ್ಲಿರುವ ಆಸ್ತಿಗಳಿಗೆ ಅಷ್ಟೇನು ಮೌಲ್ಯ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ಗೋಕರ್ಣ ಪ್ರಸಿದ್ಧಿಯಾಗಿರುವುದು ಬೀಚ್ ಗಳಿಂದ ಎಂದರೆ ಸರಿ . ಆ ರೀತಿ ಬೀಚ್ ಗಳು ಇರುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗಿರುವುದರಿಂದ ಸದರಿ ಬೀಚ್ ಗೆ ಲಗತ್ತಾಗಿರುವ ಆಸ್ತಿಗಳ ಮೌಲ್ಯ ಜಾಸ್ತಿಯಾಯಿತು ಎಂದರೆ ಇರಬಹುದು . ಅದೇ ರೀತಿ ಸಮುದ್ರದ ತೀರದಲ್ಲಿ ಇರುವ ಎಲ್ಲಾ ಜಮೀನುಗಳಲ್ಲಿ ಸಾಕಷ್ಟು ಹೊಟೆಲ್ ಗಳು ಹಾಗೂ ರೆಸಾರ್ಟಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳಲ್ಲಿಯೂ ಸಹ ದೊಡ್ಡ ದೊಡ್ಡ ಕಟ್ಟಡಗಳು ಹಾಗೂ ರೆಸಾರ್ಟಗಳು ಆಗಿವೆ

ಎಂದರೆ ನನಗೆ ಗೊತ್ತಿಲ್ಲ . ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳ ದಾಖಲೆಗಳಲ್ಲಿ ಮಾತ್ರ ನಮ್ಮ ಹೆಸರು ಇದ್ದು, ಸದರಿ ಆಸ್ತಿಗಳಲ್ಲಿ ನಮ್ಮ ಕಬ್ಜಾ ವಹಿವಾಟು ಇಲ್ಲ ಎಂದರೆ ಸರಿ .

12. ನನ್ನ ತಂದೆಯವರು ಮೃತರಾದ ನಂತರ ಅವರ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳ ದಾಖಲೆಗಳು ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ದಾವಾ ಆಸ್ತಿಗಳ ದಾಖಲೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ . ಆ ರೀತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲೆಗಳು ಆಗಿರುವ ಬಗ್ಗೆ ನಾನು ವಿಚಾರಿಸಿರುವುದಿಲ್ಲ . ಆ ರೀತಿ 1 ನೇ ಪ್ರೇತಿವಾದಿಯ ಹೆಸರಿನಲ್ಲಿ ದಾಖಲೆಗಳು ಆಗಿರುವ ಬಗ್ಗೆ ನನಗೆ 2021 ನೇ ಇಸವಿಯ ಫೆಬ್ರುವರಿ ತಿಂಗಳಿನಲ್ಲಿ ಗೊತ್ತಾಯಿತು . 1 ನೇ ಪ್ರತಿವಾದಿಯ ಹೆಸರಿನಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ಇದ್ದ ಬಗ್ಗೆ ಕಡಿಮೆ ಮಾಡಲು ನಾವು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ . ನನ್ನ ಪ್ರಕಾರ ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ದಾಖಲಾಗಿರುತ್ತದೆ . ಈ ರೀತಿ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ದಾಖಲಾಗಬೇಕಾದರೆ ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಬೇಕಾಗುತ್ತದೆ ಎಂದರೆ ಇರಬಹುದು. ಈ ರೀತಿ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗುವ ಸಂದರ್ಭದಲ್ಲಿ ನಾವೆಲ್ಲರೂ ಒಪ್ಪಿಗೆ ಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು ಒಪ್ಪಿಗೆ ಕೊಟ್ಟಿರಬಹುದು ಆದರೆ ತನಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ .

13. ನಮ್ಮ ವಾದ ಪತ್ರವನ್ನು ಹಾಗೂ ರೀ ಜೊಯಂಡರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ . ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳ ವಹಿವಾಟನ್ನು ನೋಡಿಕೊಳ್ಳಲು ನಾವು 1 ನೇ ಪ್ರತಿವಾದಿಗೆ ಒಪ್ಪಿಗೆಯನ್ನು ಕೊಟ್ಟಿಲ್ಲ . ವಾದ ಪತ್ರದ ಜೊತೆಗೆ ನಾವು

ಎರಡು ಸಾಮಾನ್ಯ ಮುಕ್ತ್ಯಾರ್ ನಾಮೆಗಳನ್ನು ಹಾಜರು ಪಡಿಸಿರುತ್ತೇವೆ ಎಂದರೆ ಸರಿ . ಆ ಬಗ್ಗೆ ವಾದ ಪತ್ರದಲ್ಲಿ ಅನೆಕ್ಷರ್ ಒಂದು ಮತ್ತು ಎರಡು ಎಂದು ದಾಖಲಾಗಿದೆ ಎಂದರೆ ಸರಿ . ಸದ್ರಿ ಅನೆಕ್ಷರ್ ಒಂದು ನಾನು , ನನ್ನ ತಾಯಿ ಹಾಗೂ ಉಳಿದ ವಾದಿಯರು ದಿಃ 23-08-2011 ರಂದು 2 ನೇ ಪ್ರತಿವಾದಿಗೆ ಬರೆದುಕೊಟ್ಟಂತಹ ಸಾಮಾನ್ಯ ಮೊಕ್ತ್ಯಾರನಾಮೆ ಎಂದರೆ ಸರಿ . ಸದ್ರಿ ಅನೆಕ್ಷರ್ ಎರಡು , ನನ್ನ ಚಿಕ್ಕಮ್ಮಳಾದ ಶಾರದಾ ವಿಶ್ವೇಶ್ವರ ಗೋಪಿರವರು ದಿಃ 02-03-2012 ರಂದು 2 ನೇ ಪ್ರತಿವಾದಿಗೆ ಬರೆದುಕೊಟ್ಟಂತಹ ಸಾಮಾನ್ಯ ಮೊಕ್ತ್ಯಾರನಾಮೆ ಎಂದರೆ ಸರಿ . ಸದರಿ ಮೊಕ್ತ್ಯಾರನಾಮೆಗಳನ್ನು ನಾವೆಲ್ಲರೂ ಸೇರಿಯೇ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . ಸದರಿ ಮೊಕ್ತ್ಯಾರನಾಮೆಗಳನ್ನು ಮಾಡಿಕೊಟ್ಟಿರುವ ಬಗ್ಗೆ ನಮ್ಮದೇನು ತಕರಾರು ಇಲ್ಲ ಎಂದರೆ ಸರಿ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.